ಪದವಿ ಪೂರ್ವ ಶಿಕ್ಷಣ ಇಲಾಖೆ	135
ಕಾಲೇಜು ಶಿಕ್ಷಣ ಇಲಾಖೆ	
ಉಪನ್ಯಾಸಕರು	1226
ಸಹಾಯಕ ನಿರ್ದೇಶಕರು	7
ರಿಜಿಸ್ಟ್ರಾರ್	20

ಆ ಸಾರ್ವಜನಿಕ ಗ್ರಂಥಾಲಯ ಇಲಾಖೆಯನ್ನು ಹೊರತುಪಡಿಸಿ ಅನುಪಾತಕ್ಕೆ ಸರಿಯಾಗಿ 'ಎ' ಶ್ರೇಣಿಯ ಕಿರಿಯ ಅಧಿಕಾರಿಗಳು ಇದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ದಿನಾಂಕ 1-1-86ರಿಂದ ಪೂರ್ವಾನ್ವಯವಾಗಿ ಯು.ಜಿ.ಸಿ. ವೇತನ ಶ್ರೇಣಿಗಳನ್ನು ಅಳವಡಿಸಲಾಗಿದ್ದು, ಆ ಯೋಜನೆಯ ಪ್ರಕಾರ ಉಪನ್ಯಾಸಕರುಗಳಿಗೆ ಕಾಲಮಿತಿ ಬಡ್ತಿಗೆ ಅವಕಾಶವಿರುವುದರಿಂದ ಈ ಇಲಾಖೆಯಲ್ಲಿ ಯಾವುದೇ ಅನುಪಾತವನ್ನು ನಿಗಧಿಗೊಳಿಸಿರುವುದಿಲ್ಲ.

ಇ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅನುಪಾತಕ್ಕೆ ಸರಿಯಾಗಿ ಹಿರಿಯ ಶ್ರೇಣಿಯ ಅಧಿಕಾರಿಗಳಿದ್ದಾರೆ.

ಈ ಕಾಲೇಜು ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ದಿನಾಂಕ 1-1-85ರಿಂದ ಪೂರ್ವಾನ್ವಯವಾಗಿ ಯು.ಜಿ.ಸಿ.ವೇತನ ಶ್ರೇಣಿಯನ್ನು ಅಳವಡಿಸಲಾಗಿದ್ದು ಕಾಲಮಿತಿ ಬಡ್ತಿಗೆ ಅವಕಾಶವಿದೆ.

ಉ ಹೊಸ ಶಿಕ್ಷಣ ನೀತಿ. ಕಪ್ಪುಹಲಗೆ ಯೋಜನೆ ಇತ್ಯಾದಿ ಕಾರ್ಯಕ್ರಮಗಳಿಂದ ಶಿಕ್ಷಣ ಇಲಾಖೆಯಲ್ಲಿ ಕೆಲಸ ಕಾರ್ಯಗಳ ಒತ್ತಡ ಹೆಚ್ಚಾಗಿದ್ದು, ಇಲಾಖೆಯನ್ನು ಎಲ್ಲಾ ಹಂತದಲ್ಲಿಯೇ ಪುನರ್ ರಚಿಸಲು ಕ್ರಮ ಕೈಗೊಳ್ಳುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ: 1991ನೇ ಸಾಲಿನಲ್ಲಿದ್ದ ಅನಧಿಕೃತ ಇಂಗ್ಲೀಷ್ ಮಾಧ್ಯಮ ಶಾಲೆಗಳ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1534 (2289)

ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ):- ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ 1991ನೇ ಸಾಲಿನಲ್ಲಿ ಇದ್ದ ಅನಧಿಕೃತ ಇಂಗ್ಲೀಷ್ ಮಾಧ್ಯಮದ ಶಾಲೆಗಳೆಷ್ಟು?

ಆ 1992ನೇ ಸಾಲಿನಲ್ಲಿ ಈ ಶಾಲೆಗಳಿಗೆ ಅನುಮತಿ ನೀಡಲಾಗಿದೆಯೇ?

ಇ ಅನುಮತಿ ನೀಡದಿದ್ದರೆ ಅಂತಹ ಶಾಲೆಗಳನ್ನು ಮುಚ್ಚಲಾಗಿದೆಯೇ?

ಶ್ರೀ ಎಂ.ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)-

ಅ ರಾಜ್ಯದಲ್ಲಿ ಅನಧಿಕೃತವೆಂದು ಘೋಷಿಸಿರುವ ಶಾಲೆಗಳ ಸಂಖ್ಯೆ 493

ಆ ಇಲ್ಲಾ.

ಇ ಇಲ್ಲಾ.

ವಿಷಯ: ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1536 (2179)

ಶ್ರೀ ಅಜಯ್‌ಕುಮಾರ್ ಸರ ನಾಯಕ್ (ಬಾಗಲಕೋಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಆಗಾಗ್ಗೆ ವಿದ್ಯುತ್ ನಿಲುಗಡೆ ಹಾಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಾಸವಾಗಲು ಕಾರಣರ್ಯಾರು?

ಶ್ರೀ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)-

ಅ ವ್ಯವಸ್ಥೆಯಲ್ಲಿನ ತೊಂದರೆಯಿಂದಾಗಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗುತ್ತಿದೆ. ಇದಕ್ಕೆ ಯಾರೂ ಕಾರಣರಲ್ಲ. ಅನಿರೀಕ್ಷಿತ ಕಾರಣಗಳಿಗಾಗಿ ಮತ್ತು ಅನಿವಾರ್ಯ ಪರಿಸ್ಥಿತಿಗಳಲ್ಲಿ

ಮಂಡಳಿಯು ನಿಯಮಿತ ಮತ್ತು ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸುತ್ತದೆ. ಇದು ಇಲ್ಲದಿದ್ದಲ್ಲಿ ಸಂಪೂರ್ಣ ವ್ಯವಸ್ಥೆಯೇ ಕುಸಿಯುವುದು.

ವಿಷಯ: ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಸಾಗಾಣಿಕೆ ಸರಬರಾಜಿನಲ್ಲಿ ಆಗಿರುವ ನಷ್ಟದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1538 (2181)

ಶ್ರಿ ಅಜಯ್‌ಕುಮಾರ್ ಸರ ನಾಯಕ್ (ಬಾಗಲಕೋಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ವಿದ್ಯುತ್ ಸಾಗಾಣಿಕೆ ಹಾಗೂ ಸರಬರಾಜಿನಲ್ಲಿ ಆಗುತ್ತಿರುವ ನಷ್ಟ ಎಷ್ಟು.

ಆ ಈ ಹಿಂದಿನ ಐದು ವರ್ಷಗಳಿಗೆ ಹೋಲಿಸಿದರೆ ಸಾಗಾಣಿಕೆ ನಷ್ಟ ಕಡಿಮೆಯಾಗಿರುವುದೇ

ಇ ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು

ಈ ಸಾಗಾಣಿಕೆ ನಷ್ಟ ಉಳಿದ ರಾಜ್ಯಗಳಿಗಿಂತ ನಮ್ಮಲ್ಲಿ ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ

ಉ ಕಡಿಮೆ ಆಗಿದ್ದಲ್ಲಿ ವೋಲ್ಟೇಜ್ ಕಡಿಮೆ ಇರಲು ಕಾರಣಗಳೇನು.

ಊ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಸತತವಾಗಿ ವಿದ್ಯುತ್ ನಿಲುಗಡೆಯಾಗಲು ಕಾರಣಗಳೇನು.

ಶ್ರಿ ಎಂ.ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು)-

ಅ 1990-91ರ ಸಾಲಿನಲ್ಲಿ ಉಂಟಾದ ನಷ್ಟ ಶೇ.19.5

ಆ ಹೌದು.

ಇ ಪ್ರತಿವರ್ಷ ಈ ನಷ್ಟವನ್ನು ಕನಿಷ್ಠ ಶೇ.0.5 ರಷ್ಟು ಕಡಿಮೆ ಮಾಡಲು ಕೈಗೊಂಡಿರುವ ವ್ಯವಸ್ಥೆ ಮತ್ತು ಸುಧಾರಣಾ ಕ್ರಮಗಳು:-

6 ಹೊಸ ವಿದ್ಯುತ್ ಪ್ರಸಾರಣಾ ಮಾರ್ಗ ಮತ್ತು ಉಪ ವಿದ್ಯುತ್ ಕೇಂದ್ರಗಳ ನಿರ್ಮಾಣ ಮತ್ತು ಹಾಲಿ ಇರುವ ಉಪ ವಿದ್ಯುತ್ ಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವುದು.

ಈ ಅಖಿಲ ಭಾರತ ಮಟ್ಟಕ್ಕೆ ಹೋಲಿಸಿದರೆ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪ್ರಸಾರಣೆ ಮತ್ತು ವಿತರಣೆ ನಷ್ಟ ಕಡಿಮೆ ಇದೆ.

ಉ ವೋಲ್ಟೇಜ್ ಕಡಿಮೆ ಇರಲು ಮುಖ್ಯ ಕಾರಣಗಳು.

1. ಎನ್‌ಟಿಪಿಸಿಯವರು ಸರಬರಾಜು ಮಾಡುತ್ತಿರುವ ವಿದ್ಯುತ್ತಿನಲ್ಲೇ ವೋಲ್ಟೇಜ್ ಕಮ್ಮಿ ಇದ್ದು, ಇಡೀ ವ್ಯವಸ್ಥೆಯಲ್ಲಿಯೇ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಉಂಟಾಗಿದೆ.
2. ಕೆಲವು ಪ್ರದೇಶಗಳಲ್ಲಿರುವ ಅತಿ ಉದ್ದದ ವಿದ್ಯುತ್ ವಿತರಣಾ ಮಾರ್ಗಗಳು.
3. ಕೆಲವು ಪ್ರದೇಶಗಳಲ್ಲಿ ಉಪ ವಿದ್ಯುತ್ ಕೇಂದ್ರಗಳು ಮತ್ತು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಓವರ್ ಲೋಡ್ ಆಗಿರುವುದು.
4. ವಿದ್ಯುತ್ ಉತ್ಪಾದನೆ ಕೇಂದ್ರಗಳಿಗೂ ಮತ್ತು ವಿದ್ಯುತ್ ಉಪಯೋಗಿಸುವ ಸ್ಥಾವರಗಳಿಗೂ ಇರುವ ಅಂತರ.
5. ಇದರ ಜೊತೆಗೆ ನೀರಾವರಿ ಪಂಪುಸೆಟ್ಟುಗಳ ಅತಿ ಬಳಕೆ.

ಊ ಪ್ರಸ್ತುತ ವಿದ್ಯುತ್ ಬೇಡಿಕೆಯನ್ನು ಲಭ್ಯತೆಗೆ ಸರಿದೂಗಿಸಲು ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ 6 ಗಂಟೆಗಳ ಅವಧಿಯ ನಿಯಮಿತ ಲೋಡ್ ಶೆಡ್ಡಿಂಗನ್ನು ಮತ್ತು ಪಟ್ಟಣ ಪ್ರದೇಶಗಳಲ್ಲಿ ಬೆಳಗಿನ ಪೀಕ್ ಲೋಡ್ ವೇಳೆಗಳಲ್ಲಿ ಒಂದು ಗಂಟೆ ಅವಧಿಯ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ.